**ದಿ ಲ್ಯಾನ್ಸೆಟ್: ಪತ್ರಿಕಾ ಪ್ರಕಟನೆ**

****ದಯವಿಟ್ಟು ಅಸಾಮಾನ್ಯ ವಾಣಿಜ್ಯ ಪ್ರತಿಬಂಧಕಾಜ್ಞೆಯನ್ನು ಗಮನಿಸಿ: ಬೆಳಗ್ಗಿನ 05:30 ಯುಕೆ ಸಮಯ (ಬೆಳಗ್ಗಿನ 11:00 ನವದೆಹಲಿ ಸಮಯ, ಬೆಳಗ್ಗಿನ 00:30 ಟೊರೊಂಟೊ ಸಮಯ) ಬುಧವಾರ 28 ಮಾರ್ಚ್**

****ಈ ಪತ್ರಿಕೆಯಲ್ಲಿ ಭಾರತದ ಮುಂಬೈಯಲ್ಲಿ ಒಂದು ಪತ್ರಿಕಾ ಸಂದರ್ಶನವಿದೆ, ಕೆಳಗೆ ನೋಡಿ****

## ತಂಬಾಕು-ಸಂಬಂಧಿತ ಕ್ಯಾನ್ಸರ್‌ಗಳು ಮತ್ತು ಸರ್ವಿಕಲ್ ಕ್ಯಾನ್ಸರ್‌ಗಳು ಭಾರತದ ಉದ್ಯೋಗ ಮಾಡುವ ವಯಸ್ಸಿನವರ ಸಾವಿಗೆ ಮುಖ್ಯ ಕಾರಣಗಳಾಗಿವೆ ಎಂದು ಪ್ರಮುಖ ಅಧ್ಯಯನವು ತೋರಿಸಿಕೊಟ್ಟಿದೆ.

ಹೊಸ ಸಂಶೋಧನೆಯು ಭಾರತದ ಕ್ಯಾನ್ಸರ್ ಸಾವಿನ ಪ್ರಮಾಣವನ್ನು ವಿಶ್ಲೇಷಿಸಿದೆ ಹಾಗೂ ಬಾಯಿ, ಜಠರ ಮತ್ತು ಶ್ವಾಸಕೋಶದ ಕ್ಯಾನ್ಸರ್‌ಗಳು ಭಾರತದ ಪುರುಷರಲ್ಲಿ ಸಾವಿನ ಪ್ರಮುಖ ಕಾರಣಗಳಾಗಿವೆ ಎಂದು ತೋರಿಸಿಕೊಟ್ಟಿದೆ. ಸರ್ವಿಕಲ್, ಜಠರ ಮತ್ತು ಸ್ತನ ಕ್ಯಾನ್ಸರ್‌ಗಳು ಭಾರತದ ಮಹಿಳೆಯರಲ್ಲಿ ಹೆಚ್ಚಿನ ಕ್ಯಾನ್ಸರ್ ಸಾವುಗಳನ್ನು ಉಂಟುಮಾಡುತ್ತವೆ. ದಿ ಲ್ಯಾನ್ಸೆಟ್‌ನಿಂದ ಆನ್‌ಲೈನ್ ಫರ್ಸ್ಟ್‌ನಲ್ಲಿ ಪ್ರಕಟವಾದ ಈ ಲೇಖನವನ್ನು ಕೆನಡಾದ ಒಎನ್‌ನ ಸೇಂಟ್ ಮೈಕೆಲ್ಸ್ ಹಾಸ್ಪಿಟಲ್ ಮತ್ತು ಯೂನಿವರ್ಸಿಟಿ ಆಫ್ ಟೊರೊಂಟೊದ ಸೆಂಟರ್ ಫಾರ್ ಗ್ಲೋಬಲ್ ಹೆಲ್ತ್ ರೀಸರ್ಚ್‌ನ ಪ್ರೊಫೆಸರ್ ಪ್ರಭಾತ್ ಜಾ ಹಾಗೂ ಭಾರತ ಮತ್ತು ಪ್ರಪಂಚದಾದ್ಯಂತದ ಅವರ ಸಹೋದ್ಯೋಗಿಗಳು ಪ್ರಕಟಿಸಿದರು.

ಮುಕ್ಕಾಲು ಭಾಗ ಭಾರತೀಯರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಆದರೂ ನಿರ್ದಿಷ್ಟ ಕ್ಯಾನ್ಸರ್‌ಗಳಿಂದ ಉಂಟಾದ ಸಾವಿನ ಪ್ರಮಾಣವನ್ನು ಹಿಂದೆ ಭಾರತದ ನಗರದ-ಜನರನ್ನು-ಆಧಾರಿತ 24 ಕ್ಯಾನ್ಸರ್ ನೋಂದಣಿ ಕಛೇರಿಗಳಿಂದ ಮತ್ತು ಗ್ರಾಮೀಣ ಪ್ರದೇಶಗಳನ್ನು ಪ್ರತಿನಿಧಿಸುವ ಕೇವಲ ಎರಡು ನೋಂದಣಿ ಕಛೇರಿಗಳಿಂದ ಪಡೆದ ಮಾಹಿತಿಯಿಂದ ಅಂದಾಜಿಸಲಾಗಿತ್ತು. ಈ ಹೊಸ ಅಧ್ಯಯನದಲ್ಲಿ ಲೇಖಕರು ಮಿಲಿಯನ್ ಡೆತ್ ಸ್ಟಡಿಯಲ್ಲಿ ಕ್ಯಾನ್ಸರ್ ಸಾವಿನ ಪ್ರಮಾಣವನ್ನು ನಿರ್ಣಯಿಸಿದ್ದಾರೆ, ಇದರ ನೇತೃತ್ವವನ್ನು ಭಾರತ ನೋಂದಣಿ ಜನರಲ್ ಕಛೇರಿಯು ವಹಿಸಿಕೊಂಡಿತ್ತು ಹಾಗೂ ಇದು ಯಾವುದೇ ಕಡಿಮೆ-ಆದಾಯದ ಅಥವಾ ಮಧ್ಯಮ-ಆದಾಯದ ದೇಶದಲ್ಲಿನ ಸಾವಿನ ಕಾರಣಗಳ ಬಗೆಗಿನ ಕೆಲವು ದೊಡ್ಡ ರಾಷ್ಟ್ರೀಯತೆ ಪ್ರತಿನಿಧಿ ಅಧ್ಯಯನಗಳಲ್ಲಿ (ಗ್ರಾಮೀಣ ಪ್ರದೇಶಗಳನ್ನೂ ಒಳಗೊಂಡ) ಒಂದಾಗಿದೆ. ಇದರ ಲೇಖಕರು ನಿರ್ದಿಷ್ಟ ಕ್ಯಾನ್ಸರ್‌ಗಳಲ್ಲಿನ ಭೌಗೋಳಿಕ ಮತ್ತು ಸಾಮಾಜಿಕ ಭಿನ್ನತೆಯ ಮೇಲೆ ಹಾಗೂ ಕ್ಯಾನ್ಸರ್‌ಗಳಿಗೆ ಈಡುಮಾಡುವ ಅಪಾಯಕಾರಿ ಅಂಶಗಳನ್ನು ಅಥವಾ ಅವುಗಳಿಗೆ ಕಾರಣವಾದ ಕಾರಕಗಳನ್ನು ನಿಯಂತ್ರಿಸುವ ಮೂಲಕ ಈ ಕ್ಯಾನ್ಸರ್‌ಗಳನ್ನು ತಪ್ಪಿಸಬಹುದಾದ ಸಾಧ್ಯತೆಯ ಮೇಲೆ ಹೆಚ್ಚು ಗಮನ ಹರಿಸಿದ್ದಾರೆ.

2010 ರಲ್ಲಿ ಸಂಪೂರ್ಣ ಭಾರತದಾದ್ಯಂತದ ಉಂಟಾದ 5,56,400 ಕ್ಯಾನ್ಸರ್ ಸಾವುಗಳಿಗೆ ಅನುಗುಣವಾಗಿ, 1,22,429 ರಲ್ಲಿ 7137 ಅಧ್ಯಯನದಲ್ಲಿ-ದಾಖಲಾದ ಸಾವುಗಳು ಕ್ಯಾನ್ಸರ್‌ನಿಂದ ಉಂಟಾಗಿವೆಯೆಂದು ಈ ಲೇಖಕರು ಕಂಡುಹಿಡಿದಿದ್ದಾರೆ. ಇದರಲ್ಲಿ ಕೆಲವು 71% (3,95,000) ನಷ್ಟು ಸಾವುಗಳು 30–69 ವರ್ಷ ವಯಸ್ಸಿನವರಲ್ಲಿ ಕಂಡುಬಂದಿದೆ (2,00,100 ಪುರುಷರು ಮತ್ತು 1,95,300 ಮಹಿಳೆಯರು). ಎಲ್ಲಾ ವಯಸ್ಸಿನವರಲ್ಲಿ 6% ನಷ್ಟು ಸಾವುಗಳು ಕ್ಯಾನ್ಸರ್‌ನಿಂದ ಉಂಟಾಗಿದೆ, ಆದರೆ 30–69 ವರ್ಷ ವಯಸ್ಸಿನ ಗುಂಪಿನವರಲ್ಲಿ ಇದು 2.5 ದಶಲಕ್ಷ ಒಟ್ಟು ಪುರುಷರ ಸಾವುಗಳ 8% ಗೆ ಮತ್ತು 1.6 ದಶಲಕ್ಷ ಒಟ್ಟು ಮಹಿಳೆಯರ ಸಾವುಗಳ 12% ಗೆ ಏರಿಕೆಯಾಗಿದೆ. 30–69 ವರ್ಷ ವಯಸ್ಸಿನ ಪುರುಷರಲ್ಲಿ ಹೆಚ್ಚು ಸಾಮಾನ್ಯವಾಗಿ ಕಂಡುಬರುವ ಮೂರು ಮಾರಕ ಕ್ಯಾನ್ಸರ್‌ಗಳೆಂದರೆ: ಬಾಯಿ (ತುಟಿ ಮತ್ತು ಗಂಟಲಕುಳಿಯನ್ನೂ ಒಳಗೊಂಡು, 45 800 [23%]), ಜಠರ (25,200 [13%]) ಮತ್ತು ಶ್ವಾಸಕೋಶ (ಶ್ವಾಸನಾಳ ಮತ್ತು ಧ್ವನಿಪೆಟ್ಟಿಗೆಯನ್ನೂ ಒಳಗೊಂಡು, 22,900 [11%]). ಮಹಿಳೆಯರಲ್ಲಿ, ಕ್ಯಾನ್ಸರ್ ಸಾವಿನ ಪ್ರಮುಖ ಕಾರಣಗಳೆಂದರೆ: ಸರ್ವಿಕಲ್ (33,400 [17%]), ಜಠರ (27,500 [14%]) ಮತ್ತು ಸ್ತನ (19,900 [10%]) ಕ್ಯಾನ್ಸರ್‌ಗಳು.

ತಂಬಾಕು-ಸಂಬಂಧಿತ ಕ್ಯಾನ್ಸರ್‌ಗಳು 30–69 ವರ್ಷ ವಯಸ್ಸಿನ ಪುರುಷರಲ್ಲಿ 42.0% (84,000) ನಷ್ಟು ಮತ್ತು ಮಹಿಳೆಯರಲ್ಲಿ 18.3% (35,700) ನಷ್ಟು ಕ್ಯಾನ್ಸರ್ ಸಾವುಗಳನ್ನು ಉಂಟುಮಾಡಿದೆ ಹಾಗೂ ಪುರುಷರು ಮತ್ತು ಮಹಿಳೆಯರು ಹೆಚ್ಚಾಗಿ ತಂಬಾಕು ಜಗಿಯುವುದರಿಂದ ಬಾಯಿಯ ಕ್ಯಾನ್ಸರ್‌ಗಳು ಶ್ವಾಸಕೋಶದ ಕ್ಯಾನ್ಸರ್‌ಗಳಿಗಿಂತ ಎರಡು ಪಟ್ಟು ಹೆಚ್ಚಾಗಿವೆ. ಲೇಖಕರು ಹೀಗೆ ಹೇಳುತ್ತಾರೆ: "30–69 ವರ್ಷ ವಯಸ್ಸಿನವರಲ್ಲಿ ಬಾಯಿಯ ಕ್ಯಾನ್ಸರ್‌ಗಳ ಸಂಖ್ಯೆಯು ಶ್ವಾಸಕೋಶದ ಕ್ಯಾನ್ಸರ್‌ಗಳ ಸಂಖ್ಯೆಯ ಎರಡು ಪಟ್ಟಿಗಿಂತಲೂ ಹೆಚ್ಚಾಗಿದೆ, ಇದು ಭಾರತದಲ್ಲಿ ತಂಬಾಕಿನಿಂದ ಉಂಟಾಗುವ ಮಾರಕ ಕ್ಯಾನ್ಸರ್‌ಗಳ ಪ್ರಮಾಣವು ಹೆಚ್ಚು-ಆದಾಯದ ದೇಶಗಳಿಗಿಂತ ಗಮನಾರ್ಹವಾಗಿ ಭಿನ್ನವಾಗಿದೆ ಎಂಬುದನ್ನು ಸೂಚಿಸುತ್ತದೆ."

ವಯಸ್ಸಿಗೆ ಅನುಗುಣವಾಗಿ ಅಂದಾಜಿಸಿದ ಪ್ರತಿ 1,00,000 ಮಂದಿಯ ಕ್ಯಾನ್ಸರ್ ಸಾವಿನ ಪ್ರಮಾಣವು ಗ್ರಾಮೀಣ ಪ್ರದೇಶಗಳಲ್ಲಿ (ಪುರುಷರು 96 ಮತ್ತು ಮಹಿಳೆಯರು 97) ಮತ್ತು ನಗರ ಪ್ರದೇಶಗಳಲ್ಲಿ (ಪುರುಷರು 102 ಮತ್ತು ಮಹಿಳೆಯರು 91) ಒಂದೇ ರೀತಿಯಿದೆ, ಆದರೆ ರಾಜ್ಯಗಳ ಮಧ್ಯೆ ಹೆಚ್ಚು ವ್ಯತ್ಯಾಸವಿದೆ. ಸಾವಿನ ಪ್ರಮಾಣವು ಹೆಚ್ಚು ಶಿಕ್ಷಣ ಪಡೆದ ವಯಸ್ಕರಿಗಿಂತ ಕಡಿಮೆ ಶಿಕ್ಷಣ ಪಡೆದವರಲ್ಲಿ ಎರಡು ಪಟ್ಟು ಹೆಚ್ಚಾಗಿದೆ: ಪುರುಷರಲ್ಲಿ, ಅನಕ್ಷರಸ್ಥರು 107 ಮತ್ತು ಹೆಚ್ಚು ಶಿಕ್ಷಣ ಪಡೆದವರು 46; ಮಹಿಳೆಯರಲ್ಲಿ, ಅನಕ್ಷರಸ್ಥರು 107 ಮತ್ತು ಹೆಚ್ಚು ಶಿಕ್ಷಣ ಪಡೆದವರು 43. ಸರ್ವಿಕಲ್ ಕ್ಯಾನ್ಸರ್ ಹಿಂದು ಮಹಿಳೆಯರಿಗಿಂತ ಮುಸ್ಲಿಮ್‌ರಲ್ಲಿ 40% ನಷ್ಟು ಕಡಿಮೆ ಸಾಮಾನ್ಯವಾಗಿ ಕಂಡುಬರುತ್ತದೆ, ಇದು ಮುಸ್ಲಿಮ್ ಪುರುಷರು ಸುನತಿ ಮಾಡುವುದರಿಂದ ಸರ್ವಿಕಲ್ ಕ್ಯಾನ್ಸರ್‌ಗೆ ಕಾರಣವಾದ ಒಂದು ಅಂಶ ಹ್ಯೂಮನ್ ಪ್ಯಾಪಿಲೋಮವೈರಸ್ (ಹೆಚ್‌ಪಿವಿ) ಸೋಂಕಿನ ವಿರುದ್ಧ ಒಂದು ರಕ್ಷಣಾತ್ಮಕ ಪರಿಣಾಮವನ್ನು ಹೊಂದಿರುವುದರಿಂದ ಆಗಿರಬಹುದು.

ಭೌಗೋಳಿಕ ಭಿನ್ನತೆಯ ವಿಷಯದಲ್ಲಿ ಲೇಖಕರು, ಈಶಾನ್ಯ ಭಾರತದ ಒಬ್ಬ 30 ವರ್ಷ ವಯಸ್ಸಿನ ಪುರುಷನು 70 ವರ್ಷ ವಯಸ್ಸಿಗಿಂತ ಮೊದಲು ಕ್ಯಾನ್ಸರ್‌ನಿಂದ ಸಾವನ್ನಪ್ಪುವ ಹೆಚ್ಚಿನ ಸಂಭಾವ್ಯತೆಯನ್ನು (11.2%) ಹೊಂದಿರುತ್ತಾನೆ ಎಂದು ಸೂಚಿಸಿದ್ದಾರೆ. ಇದಕ್ಕೆ ವಿರುದ್ಧವಾಗಿ, ಪಕ್ಕದ ರಾಜ್ಯಗಳಾದ ಭಾರತದ ಪೂರ್ವಭಾಗದ ಬಿಹಾರ, ಜಾರ್ಖಂಡ್ ಮತ್ತು ಒರಿಸ್ಸಾದಲ್ಲಿ ಈ ಅಪಾಯವು ಪುರುಷರಲ್ಲಿ 3% ಗಿಂತಲೂ ಕಡಿಮೆಯಿರುತ್ತದೆ. ಮಹಿಳೆಯರಲ್ಲಿ, 70 ವರ್ಷ ವಯಸ್ಸಿಗಿಂತ ಮೊದಲು ಕ್ಯಾನ್ಸರ್‌ನಿಂದ ಸಾವನ್ನಪ್ಪುವ ಹೆಚ್ಚಿನ ಅಪಾಯವು (6.0%) ಈಶಾನ್ಯ ರಾಜ್ಯಗಳಲ್ಲಿ ಕಂಡುಬರುತ್ತದೆ.

ಕ್ಯಾನ್ಸರ್‌ನಿಂದ ಉಂಟಾಗುವ ಸಾವುಗಳ ಪ್ರಮಾಣವು ಯುಎಸ್‌ಎ ಅಥವಾ ಯುಕೆಯ ಪುರುಷರು ಮತ್ತು ಮಹಿಳೆಯರಿಗಿಂತ ಭಾರತದ ಪುರುಷರಲ್ಲಿ 40% ನಷ್ಟು ಮತ್ತು ಮಹಿಳೆಯರಲ್ಲಿ 30% ನಷ್ಟು ಕಡಿಮೆಯಿದೆ (ಕೋಷ್ಟಕ 1). ಆದರೆ, ಕ್ಯಾನ್ಸರ್ ಸಾವಿನ ಪ್ರಮಾಣವು ಹೆಚ್ಚಾಗಬಹುದೆಂದು, ನಿರ್ದಿಷ್ಟವಾಗಿ ಧೂಮಪಾನದ ವಯಸ್ಸು-ನಿರ್ದಿಷ್ಟ ಪ್ರಮಾಣದಲ್ಲಿ ಏರಿಕೆಯಾಗಬಹುದೆಂದು ನಿರೀಕ್ಷಿಸಲಾಗಿದೆ. ಲೇಖಕರು ಹೀಗೆಂದು ನಿರ್ಣಯಕ್ಕೆ ಬಂದಿದ್ದಾರೆ: "ತಂಬಾಕು-ಸಂಬಂಧಿತ ಮತ್ತು ಸರ್ವಿಕಲ್ ಕ್ಯಾನ್ಸರ್‌ಗಳನ್ನು ತಡೆಗಟ್ಟುವುದರಿಂದ ಹಾಗೂ ಚಿಕಿತ್ಸೆ ನೀಡಬಹುದಾದ ಕ್ಯಾನ್ಸರ್‌ಗಳನ್ನು ಬೇಗನೆ ಪತ್ತೆಹಚ್ಚುವುದರಿಂದ ಭಾರತದಲ್ಲಿ, ವಿಶೇಷವಾಗಿ ಕ್ಯಾನ್ಸರ್ ಸೇವೆಗಳು ಲಭ್ಯವಾಗದ ಗ್ರಾಮೀಣ ಪ್ರದೇಶಗಳಲ್ಲಿ, ಕ್ಯಾನ್ಸರ್‌ನಿಂದ ಉಂಟಾಗುವ ಸಾವಿನ ಪ್ರಮಾಣವನ್ನು ಕಡಿಮೆ ಮಾಡಬಹುದು. ಭಾರತದಲ್ಲಿ ಆಗುತ್ತಿರುವ ಕ್ಯಾನ್ಸರ್ ಪ್ರಮಾಣದಲ್ಲಿನ ಗಮನಾರ್ಹ ಬದಲಾವಣೆಯು ಇನ್ನೂ ಕಂಡುಹಿಡಿಯಬೇಕಾದ ಇತರ ಅಪಾಯಕಾರಿ ಅಂಶಗಳು ಅಥವಾ ಕಾರಕಗಳಿವೆ ಎಂಬುದನ್ನು ಸೂಚಿಸುತ್ತದೆ."

**ಭಾರತದಲ್ಲಿ ಮಾರ್ಚ್ 28 ರಂದು ನಡೆಯುವ ಪತ್ರಿಕಾ ಸಂದರ್ಶನದಲ್ಲಿ ಪ್ರೊಫೆಸರ್ ಪ್ರಭಾತ್ ಜಾ ಮತ್ತು ಇತರ ಲೇಖಕರು ಪ್ರಸ್ತುತವಿರುತ್ತಾರೆ. ಭಾರತೀಯ ಮಾಧ್ಯಮದ ವಿಚಾರಣೆಗಾಗಿ, ದಯವಿಟ್ಟು ಸಂಪರ್ಕಿಸಿ: ಪ್ರಭಾ ಸತಿ, ದೂರವಾಣಿ: +91 971 196 4550, ಇಮೇಲ್: satip@smh.ca. ಪ್ರಪಂಚದ ಉಳಿದ ಮಾಧ್ಯಮಗಳ ವಿಚಾರಣೆಗಾಗಿ, ದಯವಿಟ್ಟು ಸಂಪರ್ಕಿಸಿ: ಲೆಸ್ಲಿ ಚರ್ಚ್, ದೂರವಾಣಿ: +1 416 452-9202 ಇಮೇಲ್: leslie.church@utoronto.ca.**

ಹೆಚ್ಚುವರಿ ಮಾಹಿತಿ: ಪತ್ರಿಕಾ ಪ್ರಕಟನೆಯು ಹಿಂದಿಯಲ್ಲಿ ಬಿಡುಗಡೆಯಾಗುತ್ತದೆ, ಒಂದು ವೀಡಿಯೊ ಸುದ್ದಿಯು ಇಂಗ್ಲಿಷ್, ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಬಿಡುಗಡೆಯಾಗುತ್ತದೆ, ಹೆಚ್ಚಾಗಿ ಕೇಳಿದ ಪ್ರಶ್ನೆಗಳು ಮತ್ತು ಪವರ್‌ಪಾಯಿಂಟ್ ಸ್ಲೈಡ್‌ಗಳು ಒಮ್ಮೆ ವಾಣಿಜ್ಯ ಪ್ರತಿಬಂಧಕಾಜ್ಞೆಯು ಅಂತ್ಯಗೊಂಡ ನಂತರ www.cghr.org/cancer ರಲ್ಲಿ ಲಭ್ಯವಾಗುತ್ತವೆ.

**ಪತ್ರಿಕಾ ಸಂದರ್ಶನ**

**ಯಾವಾಗ:** ಬುಧವಾರ, ಮಾರ್ಚ್ 28, 2012, 11.00 – 13.30 ಮುಂಬೈ ಸಮಯದಿಂದ.

**ಎಲ್ಲಿ:** ಟಾಟಾ ಮೆಮೋರಿಯಲ್ ಹಾಸ್ಪಿಟಲ್
ರಸ್ತಮ್ ಚೋಕ್ಸಿ ಆಡಿಟೋರಿಯಂ
ಗೋಲ್ಡನ್ ಜೂಬ್ಲಿ ಬ್ಲಾಕ್
ಪರೇಲ್ – ಮುಂಬೈ

**ವೈದ್ಯರ ಪಟ್ಟಿ:** ಡಾ. ರಾಜೇಂದ್ರ ಬಾದ್ವೆ, ನಿರ್ದೇಶಕರು, ಟಾಟಾ ಮೆಮೋರಿಯಲ್ ಹಾಸ್ಪಿಟಲ್ ಮುಂಬೈ, ಭಾರತ

ಪ್ರೊ. ಪ್ರಭಾತ್ ಜಾ, ನಿರ್ದೇಶಕರು, ಸೆಂಟರ್ ಫಾರ್ ಗ್ಲೋಬಲ್ ಹೆಲ್ತ್ ರೀಸರ್ಚ್, ಯೂನಿವರ್ಸಿಟಿ ಆಫ್ ಟೊರೊಂಟೊ, ಟೊರೊಂಟೊ, ಕೆನಡಾ

ಪ್ರೊ. ರಾಜೇಶ್ ದೀಕ್ಷಿತ್, ಸೋಂಕುಶಾಸ್ತ್ರದ ಮುಖ್ಯಸ್ಥರು, ಟಾಟಾ ಮೆಮೋರಿಯಲ್ ಹಾಸ್ಪಿಟಲ್, ಮುಂಬೈ, ಭಾರತ

**ಆಹ್ವಾನಕ್ಕಾಗಿ, ಪ್ರಭಾ ಸತಿಯವರನ್ನು ಸಂಪರ್ಕಿಸಿ (ಮೇಲೆ ನೋಡಿ)**

**ಸಂಪೂರ್ಣ ಲೇಖನ ಮತ್ತು ಪ್ರತಿಕ್ರಿಯೆಗಳಿಗಾಗಿ ನೋಡಿ: http://press.thelancet.com/indiacancer.pdf**

ಗಮನಿಸಿ: ಮೇಲಿನ ಲಿಂಕ್ ಕೇವಲ ಪತ್ರಕರ್ತರಿಗೆ ಮಾತ್ರ; ನಿಮ್ಮ ಓದುಗರು ಈ ಪುಟವನ್ನು ಮುಕ್ತವಾಗಿ ಪಡೆಯುವುದಕ್ಕಾಗಿ ನೀವು ಒಂದು ಲಿಂಕ್ ಒದಗಿಸಲು ಬಯಸಿದರೆ, ದಯವಿಟ್ಟು ಈ ಕೆಳಗಿನದನ್ನು ಬಳಸಿ, ಇದು ವಾಣಿಜ್ಯ ಪ್ರತಿಬಂಧಕಾಜ್ಞೆಯು ಅಂತ್ಯಗೊಂಡಾಗ ಕೆಲಸ ಮಾಡುತ್ತದೆ:

http://www.thelancet.com/journals/lancet/article/PIIS0140-6736(12)60358-4/abstract